ದಿನಾಂಕ **: 19.12.2025** ರಂದು ಪಿಡಬ್ಲ್ಯೂ - 2 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀಮತಿ ಕೆ.ಎಸ್., 2 ರಿಂದ 4 ನೇ ಪ್ರತಿವಾದಿ ಪರ ವಕೀಲರಿಂದಃ

ನಾನು 1977 ರಲ್ಲಿ ಜನಿಸಿರುತ್ತೇನೆ. ನನ್ನ ತಾಯಿಗೆ 1970 ರಿಂದ 1973 ರ ಒಳಗೆ ಮದುವೆಯಾಗಿರುತ್ತದೆ. ನನ್ನ ಅಜ್ಜ ಮೃತಪಡುವ ಸಮಯದಲ್ಲಿ ನನ್ನ ತಾಯಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ತಿಳಿದಿಲ್ಲ. ನನ್ನ ಅಜ್ಜ ಸಾಣೂರಿನಲ್ಲಿ ಮರಣ ಹೊಂದಿರುತ್ತಾರೆ. ನನ್ನ ಅಜ್ಜ ಜಿನ್ನಪ್ಪ ಹೆಗ್ಗಡೆಯವರು 1953 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಗಂಡ ಶ್ರೀಧರ ಪಾಂಡೆಯವರು ಸುಮಾರು 14 ವರ್ಷದ ಹಿಂದೆ ಅಂದರೆ 2011 ಅಥವಾ 2012 ರಲ್ಲಿ ಮರಣ ಹೊಂದಿರಬಹುದು. ಜಿನ್ನಪ್ಪ ಹೆಗ್ಗಡೆಯವರ ಹೆಂಡತಿಯ ಹೆಸರು ಪದ್ಮಾವತಿ. ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರಿಗೆ ಒಟ್ಟು 6 ಜನ ಮಕ್ಕಳಿದ್ದರು. ಅವರ ಹೆಸರು ಲಕ್ಷ್ಮಿ , 1 ನೇ ಪ್ರತಿವಾದಿ , ಸುಮನಾಜಿ, ರತ್ನಮ್ಮ , ಸರಸ್ವತಿ, ಶ್ರೀಧರ ಪಾಂಡಿ ಎಂದರೆ ಸರಿ. ಲಕ್ಷ್ಮಿಯವರು ಮಕ್ಕಳಿಲ್ಲದೇ ಮೃತಪಟ್ಟಿರುತ್ತಾರೆ. ಅವರಿಗೆ ಮದುವೆಯಾಗಿದೆಯೋ ಇಲ್ಲವೋ ಎಂದು ನನಗೆ ಮಾಹಿತಿ ಇಲ್ಲ.

ಸುಮನಾಜಿಯವರು ಸುಮಾರು 10 ವರ್ಷದ ಹಿಂದೆ ಮದುವೆಯಾಗಿರುತ್ತಾರೆ. ಶ್ರೀಧರ ಪಾಂಡಿಯವರ ವಾರೀಸುದಾರರಾಗಿ 2 ರಿಂದ 4 ನೇ ಪ್ರತಿವಾದಿಯರು ಎಂದರೆ ಸರಿ. 2 ನೇ ಪ್ರತಿವಾದಿಯ ತಂದೆಯ ಹೆಸರು ಶಾಂತಿರಾಜ ಪಾಂಡಿ. ಶ್ರೀಧರ ಪಾಂಡಿಯವರ ತಾಯಿ ಪದ್ಮಾವತಿ ಮತ್ತು ಶಾಂತಿರಾಜ ಪಾಂಡಿಯವರು ಸಹೋದರ ಸಹೋದರಿಯರು. 2 ನೇ ಪ್ರತಿವಾದಿಯ ತಾಯಿ ಅಂದರೆ ಶಾಂತಿರಾಜ ಪಾಂಡಿಯವರ ಹೆಂಡತಿಯ ಹೆಸರು ಪದ್ಮಾವತಿ ಎಂದರೆ ಸರಿ. ಜಿನ್ನಪ್ಪ ಹೆಗ್ಗಡೆಯವರ ಹೆಂಡತಿ ಪದ್ಮಾವತಿಯವರು 1987 ರಲ್ಲಿ ಮೃತಪಟ್ಟಿರುತ್ತಾರೆ. 1 ನೇ ಪ್ರತಿವಾದಿ ಮತ್ತು ಶ್ರೀಧರ ಪಾಂಡಿಯವರು, ಶ್ರೀಧರ ಪಾಂಡಿಯವರು ಜೀವಂತಹ ಇರುವಾಗ ಒಳ್ಳೆಯ ಬಾಂಧವ್ಯದಲ್ಲಿ ಇದ್ದರು. ಶ್ರೀಧರ ಪಾಂಡಿಯವರಿಗೆ 1 ನೇ ಪ್ರತಿವಾದಿಯ ಮೇಲೆ ನಂಬಿಕೆ, ಪ್ರೀತಿ ಮತ್ತು ವಿಶ್ವಾಸ ಇತ್ತು ಎಂದರೆ ಸರಿ. ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರ ಹಕ್ಕಿನ ಎಲ್ಲಾ ಸ್ಥಿರಾಸ್ತಿಗಳನ್ನು 1 ನೇ ಪ್ರತಿವಾದಿಯವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಶ್ರೀಧರ ಪಾಂಡಿ ಮತ್ತು 1 ನೇ ಪ್ರತಿವಾದಿ ಜೊತೆಯಾಗಿ ನೋಡಿಕೊಳ್ಳುತ್ತಿದ್ದರು. ಶ್ರೀಧರ ಪಾಂಡಿ ಮತ್ತು 1 ನೇ ಪ್ರತಿವಾದಿಯವರು ಸ್ವತ್ತುಗಳನ್ನು ಜೊತೆಯಾಗಿ ನೋಡಿಕೊಳ್ಳುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರ ಸ್ವತ್ತುಗಳನ್ನು ಶ್ರೀಧರ ಪಾಂಡಿಯವರು ಮತ್ತು 1 ನೇ ಪ್ರತಿವಾದಿಯವರು ಜೊತೆಯಾಗಿ ನೋಡಿಕೊಂಡು ಬರುತ್ತಿದ್ದರು ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರ ಎಲ್ಲಾ

ವಾರೀಸುದಾರರು ಅವರ ಹಕ್ಕಿನ ಸ್ಥಿರಾಸ್ತಿಗಳಿಗೆ ಆಗಾಗ್ಗೆ ಬಂದು ಹೋಗುತ್ತಿದ್ದರು ಎಂದರೆ ಸರಿ. ನಾನು ಕಿರಿಯವನಾಗಿರುವುದರಿಂದ ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರ ಸ್ವತ್ತುಗಳ ಬಗ್ಗೆ ಮತ್ತು ಕುಟುಂಬದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ಸಂಪೂರ್ಣವಾದ ಮಾಹಿತಿಯು ನನ್ನ ತಾಯಿ ಅಂದರೆ 1 ನೇ ವಾದಿ ಮತ್ತು ಸರಸ್ವತಿಯವರಿಗೆ ಇರುತ್ತದೆ ಎಂದರೆ ಸರಿ.

2 ನೇ ಪ್ರತಿವಾದಿಯ ತಾಯಿಯಾದ ಪದ್ಮಾವತಿಯವರು 2 ನೇ ಪ್ರತಿವಾದಿ 9 ವರ್ಷದವರಿರುವಾಗ ಮೃತಪಟ್ಟಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. 2 ನೇ ಪ್ರತಿವಾದಿಯವರು ಅವರಿಗೆ 3 ನೇ ವರ್ಷವಾಗಿರುವಾಗ ಸಾಣೂರಿನ ಮನೆಯಲ್ಲಿ ವಾಸವಾಗಿದ್ದರು ಎಂದರೆ ನನಗೆ ತಿಳಿದಿಲ್ಲ. 2 ನೇ ಪ್ರತಿವಾದಿಯು ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಾಣೂರಿನ ಮನೆಯಿಂದಲೇ ಹೋಗಿ ಬಂದು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರ ಹಕ್ಕಿನ ಸ್ಥಿರಾಸ್ತಿಗಳಿಗೆ ಸಂಬಧಿಸಿದಂತೆ ಈ ಪ್ರಕರಣ ಬಿಟ್ಟು ಒಟ್ಟು 4 ದಾವೆಗಳು ಚಾಲ್ತಿಯಲ್ಲಿದೆ. ಮೂಡಬಿದ್ರೆಯಲ್ಲಿ 2 ದಾವೆಗಳು ಇರುತ್ತದೆ. ಮೂಡಬಿದ್ರೆಯಲ್ಲಿರುವಂತಹ ಎರಡು ಪ್ರಕರಣಗಳನ್ನು 1 ಮತ್ತು 2 ನೇ ವಾದಿ ಹಾಗೂ 2 ರಿಂದ 4 ನೇ ಪ್ರತಿವಾದಿಯರು ಸೇರಿ ಸಲ್ಲಿಸಿರುತ್ತೇವೆ. 1 ನೇ ಪ್ರತಿವಾದಿಯು ನನ್ನ ವಿರುದ್ಧ

ಮೂಡಬಿದ್ರೆಯ ನ್ಯಾಯಾಲಯದಲ್ಲಿ ಅಸಲು ದಾವೆ 219/2020 ರಂತೆ ಪ್ರಕರಣ ದಾಖಲು ಮಾಡಿದ್ದಾರೆ. ಸದರಿ ಪ್ರಕರಣ ಈಗ ಚಾಲ್ತಿಯಲ್ಲಿದೆ. ಸದರಿ ಪ್ರಕರಣದಲ್ಲಿ 1 ನೇ ಪ್ರತಿವಾದಿ ನನ್ನ ವಿರುದ್ಧ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರತಿಬಂಧಕಾಜ್ಞೆ ಈಗ ತೆರವುಗೊಂಡಿದೆ.

ಬೆಳ್ತಂಗಡಿ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದ ಅಸಲು ದಾವೆ 34/2014 ರ ಪ್ರಕರಣದ ಬಗ್ಗೆ ಮತ್ತು ಅದರ ವಾದಪತ್ರದಲ್ಲಿ ಬರೆದಿರುವಂತಹ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಪ್ರಕರಣದಲ್ಲಿ ಜಿನ್ನಪ್ಪ ಹೆಗ್ಗಡೆಯವರ ವಾರೀಸುದಾರರು ಹಾಜರಾಗಿದ್ದಾರಾ ಮತ್ತು ಹಾಜರಾಗಿದ್ದರೆ ಪ್ರತಿವಾದಪತ್ರವನ್ನು ಸಲ್ಲಿಸಿ , ಏನು ಸಾಧನೆ ಮಾಡುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ಪ್ರಕರಣವನ್ನು ಶುಭಾಶ್ಚಂದ್ರ ರವರು ದಾಖಲು ಮಾಡಿದ್ದು ಎಂದು ತಿಳಿದುಕೊಂಡಿದ್ದೇನೆ. ಸದರಿ ದಾವೆಯು ಈಗ ವಜಾವಾಗಿರುತ್ತದೆ. ಆದರೆ ಯಾವಾಗ ವಜಾವಾಗಿದೆ ಎಂದು ನನಗೆ ತಿಳಿದಿಲ್ಲ. ಸದರಿ ಪ್ರಕರಣ ನ್ಯಾಯಾಲಯದಲ್ಲಿ ಇರುವಂತಹ ಸಮಯದಲ್ಲಿ ನನ್ನ ತಾಯಿಯ ಜೊತೆ ನಾನು ನ್ಯಾಯಾಲಯಕ್ಕೆ ಹೋಗಿರುತ್ತೇನೆ. ಸದರಿ ಪ್ರಕರಣದಲ್ಲಿ ನನ್ನ ತಾಯಿಯು ಪ್ರತಿವಾದ ಪತ್ರ ಸಲ್ಲಿಸಿದ್ದರು. ಸದರಿ ಪ್ರಕರಣದಲ್ಲಿ ನನ್ನ ತಾಯಿಯ ಪರವಾಗಿ ಅಜಿತ್ ವಕೀಲರು ಹಾಜರಾಗಿದ್ದರು. ಸದರಿ ದಾವೆಯಲ್ಲಿ ನಮೂದಿಸಿದ ಸ್ವತ್ತುಗಳು ಅಂತಮ್ಮ ರವರಿಂದ ಬಂದಂತಹ

ಸ್ವತ್ತುಗಳು ಆಗಿರುವುದಿಲ್ಲ ಎಂದು 2 ನೇ ಪ್ರತಿವಾದಿಯು ಸಾಧನೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ 2 ನೇ ಪ್ರತಿವಾದಿಗೆ 1 ನೇ ಪ್ರತಿವಾದಿಯ ಶಿಷ್ಯರಾದ ಅನಿಲ್ ಕುಮಾರ್ ಹೆಗ್ಗಡೆ ವಕೀಲರು ಹಾಜರಾಗಿದ್ದರು ಎಂದರೆ ಸರಿ. ಸದರಿ ಪ್ರಕರಣ ಊರ್ಜಿತ ಇರುವಂತಹ ಸಮಯದಲ್ಲಿ ಶ್ರೀಧರ ಪಾಂಡಿಯವರ ಹೆಂಡತಿ ಮಕ್ಕಳಿಗೆ 1 ನೇ ಪ್ರತಿವಾದಿಯ ಮೇಲೆ ನಂಬಿಕೆ ಮತ್ತು ವಿಶ್ವಾಸ ಇತ್ತು ಎಂದರೆ ನನಗೆ ತಿಳಿದಿಲ್ಲ.

ನನಗೆ ಜೈನ್ ಕಾಯ್ದೆಯ ಬಗ್ಗೆ ತಿಳಿದಿದೆ. ಜೈನ್ ಉತ್ತರಾಧಿಕಾರ ಕಾಯ್ದೆ ಪ್ರಕಾರ ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿ ಯವರ ಇಬ್ಬರು ಗಂಡು ಮಕ್ಕಳಿಗೆ ಸಮಾನ ಪಾಲು ಇರುತ್ತದೆ ಎಂದರೆ ಸರಿ. ಜಿನ್ನಪ್ಪ ಹೆಗ್ಗಡೆಯವರಿಗೆ ಸೇರಿದ ಒಟ್ಟು ಎಷ್ಟು ಆಸ್ತಿಗಳು ಇದೆ ಎಂದು ತಿಳಿದಿಲ್ಲ. ಆದರೆ ಎಲ್ಲೆಲ್ಲಿ ಇದೆ ಎಂದು ತಿಳಿದಿದೆ. ಅವರಿಗೆ ಸಂಬಂಂಧಿಸಿದ ಸ್ವತ್ತುಗಳು ಮರೋಡಿ, ಪೆರಾಡಿ, ಸಾಣೂರು, ಇರ್ವತ್ತೂರು, ಸಾಣೂರು ದರ್ಕಾಸ್ತು, ಮಾಂಟ್ರಾಡಿ , ನೆಲ್ಲಿಕಾರು ಮತ್ತು ಶಿರ್ತಾಡಿಯಲ್ಲಿರುತ್ತದೆ. ಆ ಪೈಕಿ ಜಿನ್ನಪ್ಪ ಹೆಗ್ಗಡೆಯವರ ಹೆಂಡತಿಯಾದ ಪದ್ಮಾವತಿಯವರ ಹಕ್ಕಿಗೆ ಸೇರಿದ ಸ್ವತ್ತುಗಳು ಎಂದರೆ ಸಾಣೂರು, ಸಾಣೂರು ದರ್ಕಾಸ್ತು, ಇರ್ವತ್ತೂರು , ಗುಡ್ಡನಬೆಟ್ಟು ಮತ್ತು ಮಾಂಟ್ರಾಡಿಯಲ್ಲಿ ಇರುತ್ತದೆ. ಇರ್ವತ್ತೂರಿನಲ್ಲಿ ಒಟ್ಟು 6 ಎಕರೆ ಸ್ವತ್ತು ಇರುತ್ತದೆ. ಇರ್ವತ್ತೂರಿನಲ್ಲಿ ಇರುವ ಸ್ವತ್ತುಗಳನ್ನು ಶ್ರೀಧರ ಪಾಂಡಿಯವರು ಅವರ ಹೆಂಡತಿ ಮತ್ತು ಮಕ್ಕಳೊಂದಿಗೆ

ಸ್ವಾಧೀನವನ್ನು ಹೊಂದಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ಅವರು ಜೀವಂತವಿರುವಾಗ ಶ್ರೀಧರ ಪಾಂಡಿಯವರು ಸಾಕಷ್ಟು ಖರ್ಚು ಮಾಡಿ, ಅಭಿವೃದ್ಧಿ ಮಾಡಿರುತ್ತಾರೆ ಎಂದರೆ ಸರಿ. ಅವರ ಮರಣಾನಂತರ ಅವರ ಮಗ ಶ್ರಿಕಾಂತ್ ರವರು ಬ್ಯಾಂಕಿನಿಂದ ಸಾಲ ಪಡೆದು, ಅಭಿವೃದ್ಧಿ ಮಾಡಿರುತ್ತಾರೆ ಎಂದರೆ, ಅಭಿವೃದ್ದಿ ಮಾಡಿರುವ ವಿಚಾರ ತಿಳಿದಿದ್ದು, ಸಾಲ ಪಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಅಲ್ಲದೇ ಸ್ವತ್ತುಗಳಲ್ಲಿ ಬೋರ್ ವೆಲ್ ತೋಡಿಸಿ, ನೀರಿನ ವ್ಯವಸ್ತೆಯನ್ನು ಶ್ರೀಕಾಂತ್ ರವರು ಮಾಡಿರುತ್ತಾರೆ ಎಂದರೆ ಸರಿ. ಎಲ್ಲಾ ಅಭಿವೃದ್ದಿಗಳನ್ನು ಮಾಡಲು 2 ರಿಂದ 4 ನೇ ಪ್ರತಿವಾದಿಯರಿಗೆ ಸಾಕಷ್ಟು ಖರ್ಚುಗಳು ಆಗಿರುತ್ತದೆ ಎಂದರೆ ಸರಿ. ಶ್ರೀಧರ ಪಾಂಡಿಯವರ ಮರಣಾನಂತರ ಅವರ ಹೆಂಡತಿ ಮತ್ತು ಮಕ್ಕಳು ಇರ್ವತ್ತೂರಿನ ಸ್ವತ್ತಿನಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಮಾಡಿ, ಇಲ್ಲಿಯವರೆಗೂ ಸ್ವತ್ತಿನ ಸ್ವಾಧೀನ ಹೊಂದಿ, ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

ಈ ಪ್ರಕರಣಕ್ಕೆ ಮಾಹಿತಿಯನ್ನು 4 ಜನ ವಾದಿಯರು ಸೇರಿ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತಾರೆ. ಈ ಪ್ರಕರಣ ಆಗುವ ಪೂರ್ವದಲ್ಲಿ ಸ್ಥಿರಾಸ್ತಿಗಳ ಪಾಲು ವಿಂಗಡಣೆಗಳ ಬಗ್ಗೆ 2 ರಿಂದ 4 ನೇ ಪ್ರತಿವಾದಿಯರ ಬಳಿ ಯಾವುದೇ ಮಾತುಕತೆ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ

ಬಳಿ ಪಾಲು ಕೇಳಿದ್ದೇವೆ ಎಂದು ಹೇಳಿದ್ದು, 4 ಜನ ವಾದಿಯರು ಸೇರಿ ಹಾಗೆ ಪಾಲು ಕೇಳಿರುತ್ತಾರೆ.

ಜಿನ್ನಪ್ಪ ಹೆಗ್ಗಡೆ ಮತ್ತ ಪದ್ಮಾವತಿಯವರಿಗೆ ಸೇರಿದ ಸ್ವತ್ತುಗಳಲ್ಲಿ ಸಾಕಷ್ಟು ಬೆಲೆ ಬಾಳುವ ಮರಗಳು ಇದ್ದವು ಎಂದರೆ ಸರಿ. 1982 ನೇ ಇಸವಿಯಿಂದ ಸದರಿ ಮರಗಳನ್ನು 1 ನೇ ಪ್ರತಿವಾದಿ ಕಡಿದು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಹಾಗೆ ಕಡಿದು ಮಾರಾಟ ಮಾಡಿದ ಮರಗಳ ಮೌಲ್ಯ 1 ಕೋಟಿಗೂ ಮಿಗಿಲಾಗಿತ್ತು ಎಂದರೆ ನನಗೆ ಮರಗಳ ಮೌಲ್ಯ ತಿಳಿದಿಲ್ಲ. ಹಾಗೆ ಮಾರಾಟ ಮಾಡಿ ಬಂದಂತಹ ಮರಗಳ ಮೌಲ್ಯದಲ್ಲಿ ನನ್ನ ತಾಯಿಗೆ ಯಾವುದೇ ಪಾಲು ನೀಡಿರುವುದಿಲ್ಲ. ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರ ಮಕ್ಕಳಲ್ಲಿ 1 ನೇ ಪ್ರತಿವಾದಿ ಹಿರಿಯರಾದ ಕಾರಣ, ನಾವೆಲ್ಲರೂ ಅವರ ಮೇಲೆ ನಂಬಿಕೆ ಮತ್ತು ವಿಶ್ವಾಸ ಇಟ್ಟುಕೊಂಡಿದ್ದೆವು ಎಂದರೆ ಸರಿ.

1 ನೇ ಪ್ರತಿವಾದಿಯು ಹಲ್ಲೆ ಮಾಡಿದ್ದಾರೆ ಎಂದು ನನ್ನ ತಾಯಿ 1 ನೇ ಪ್ರತಿವಾದಿಯ ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸರಿ. ಸದರಿ ಪ್ರಕರಣವನ್ನು ಮಾತುಕತೆಯ ಮೂಲಕ ಅಲ್ಲೇ ಮುಕ್ತಾಯ ಗೊಳಿಸಲಾಗಿತ್ತು ಎಂದರೆ ಸರಿ. ಸದರಿ ದೂರನ್ನು ಅಂದಾಜು 4 – 5 ವರ್ಷಗಳ ಹಿಂದೆ ನೀಡಲಾಗಿತ್ತು. ಬೆಳ್ತಂಗಡಿ ನ್ಯಾಯಾಲಯದಲ್ಲಿ ಅಸಲು ದಾವೆ 34/2014

ರಲ್ಲಿ ಸಲ್ಲಿಸಿದ ದಾವೆಯಲ್ಲಿನ ಸ್ಥಿರಾಸ್ತಿಗಳಿಗೆ ಶಾಂತಿರಾಜ ಪಾಂಡಿಯವರಿಗೂ ಸಹಾ ಹಕ್ಕು ಇತ್ತು ಎಂದರೆ ಸರಿ. ಸದರಿ ಶಾಂತಿರಾಜ ಪಾಂಡಿಯವರಿಗೆ ಸೇರಿದಂತಹ ಸ್ವತ್ತಿನ ಮೇಲೆ 2 ನೇ ಪ್ರತಿವಾದಿ ಹಕ್ಕುದಾರರು ಎಂದರೆ ಸರಿ. ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರ ಹಕ್ಕಿನ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಸುಮಾರು 10 ರಿಂದ 15 ಬಾರಿ ನಮ್ಮ ನಡುವೆ ಮಾತುಕತೆಯಾಗಿರುತ್ತದೆ.

ಈಗ ನನಗೆ ತೋರಿಸಿದ ನಿಡಿ - 2 ದಾಖಲೆಯು ಆಗುವಾಗ ಮಾತುಕತೆ ಮೂಡಬಿದ್ರೆಯ ಜಯಮಾಲ ಹೋಟೇಲ್ ನಲ್ಲಿ ಆಗಿರುತ್ತದೆ. ನಿಡಿ - 2 ದಾಖಲೆಯನ್ನು ಬರೆಯುವ ಸಮಯದಲ್ಲಿ, ಅದರಲ್ಲಿ ಬರೆದಿರುವಂತಹ ಶರತ್ತುಗಳನ್ನು 3 ತಿಂಗಳಲ್ಲಿ ಸಂಪೂರ್ಣಗೊಳಿಸಬೇಕು ಎನ್ನುವ ಮಾತುಕತೆಯಾಗಿರುತ್ತದೆ ಎಂದರೆ ಸರಿ. ಸದರಿ ಮಾತುಕತೆಗೆ 1 ನೇ ಪ್ರತಿವಾದಿಯ ಪರವಾಗಿ ವಕೀಲರಾದ ಶ್ರೀ ಎಂ.ಕೆ.ವಿ.ಕೆ. ಯವರೂ ಸಹಾ ಭಾಗವಹಿಸಿದ್ದರು. ಸದರಿ ದಾಖಲೆಯ ಪ್ರಕಾರವಾಗಿ 1 ನೇ ಪ್ರತಿವಾದಿಗೆ ತಿಳಿಸಿದಂತಹ ಶರತ್ತುಗಳ ಪ್ರಕಾರ 1 ನೇ ಪ್ರತಿವಾದಿಯು ದಾಖಲೆಗಳನ್ನು ಮಾಡಿಕೊಟ್ಟಿರುವುದಿಲ್ಲ. ಸದರಿ ಶರತ್ತುಗಳ ಅನ್ವಯ 1 ನೇ ಪ್ರತಿವಾದಿಯು ನೊಂದಣಿಗೆ ಪೂರ್ವದಲ್ಲಿ ಬೇಕಾದಂತಹ ದಾಖಲೆಗಳನ್ನು ನಮಗೆ ಮಾಡಿಕೊಟ್ಟಿರುವುದಿಲ್ಲ. ನಿಡಿ - 2 ರಂತೆ ಮಾತುಕತೆಯಾಗುವ ಸಮಯದಲ್ಲಿ 1 ನೇ ಪ್ರತಿವಾದಿಯು ಶರತ್ತುಗಳನ್ನು ಸರಿಯಾಗಿ ಪಾಲಿಸದೇ ಇರುವ ಕಾರಣ, ನಿಡಿ - 2 ಕ್ಕೆ ಯಾವುದೇ ಮಾನ್ಯತೆ

ಇರುವುದಿಲ್ಲ ಎಂದರೆ ಸರಿ. ನಿಡಿ - 2 ನ್ನು ಬರೆದವರು ಯಾರು ಎಂದು ನನಗೆ ತಿಳಿದಿಲ್ಲ. ಸದರಿ ದಾಖಲೆಯನ್ನು ಬರೆಯುವ ಸಮಯದಲ್ಲಿ ಯಾರು ಯಾರು ಇದ್ದರು ಎಂದು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು 1 ನೇ ಪ್ರತಿವಾದಿ ಒಳ್ಳೆಯ ಸಂಬಂಧವನ್ನು ಹೊಂದಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನ್ನ ಮತ್ತು 2 ರಿಂದ 4 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯ ಅಳಿಯನ ವಿರುದ್ಧ ಸುಳ್ಳು ದೂರನ್ನು ನೀಡಿ, ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿ. ನಿಡಿ - 2 ರಂತೆ ಮಾತುಕತೆಯಾಗುವ ಹಾಗೂ ಬರವಣಿಗೆಯಾಗುವ ಸಮಯದಲ್ಲಿ 1 ನೇ ಪ್ರತಿವಾದಿಯ ವಕೀಲರು ದಿಃ08.05.1984 ಮತ್ತು ದಿಃ29.03.1952 ರ ವೀಲುನಾಮೆಯ ಬಗ್ಗೆ ಪ್ರಸ್ತಾವನೆ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯು ಈ ಪ್ರಕರಣದಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ವೀಲುನಾಮೆಗಳ ಬಗ್ಗೆ ನಿಡಿ - 2 ರಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಬೆಳ್ತಂಗಡಿಯಲ್ಲಿ ಇದ್ದಂತಹ ಅಸಲು ದಾವೆ 34/2014 ರಲ್ಲಿ 1 ನೇ ಪ್ರತಿವಾದಿಯು ಈ ಪ್ರಕರಣದಲ್ಲಿ ತಿಳಿಸಿರುವಂತಹ ವೀಲುನಾಮೆಯ ವಿಷಗಳನು ಪ್ರಸ್ತಾಪಿಸಿರುವುದಿಲ್ಲ ಎಂದರೆ ಸರಿ. ಸದರಿ ವೀಲುನಾಮೆಗಳ ಬಗ್ಗೆ ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರ ವಾರೀಸುದಾರರ ಗಮನಕ್ಕೆ ತಂದಿರುವುದಿಲ್ಲ. ಇಲ್ಲಿಯವರೆಗೆ ಆದಂತಹ ರಾಜಿ ಪಂಚಾಯ್ತಿಯ ಸಮಯದಲ್ಲಿ 1 ನೇ ಪ್ರತಿವಾದಿಯು ತಾವು ಮನೆಯ ಹಿರಿಯರಾದ ಕಾರಣ

ತಮಗೆ ಸ್ವಲ್ಪ ಹೆಚ್ಚಿ ನ ಸ್ಥಿರಾಸ್ತಿ ಬೇಕು ಎಂದು ಕೇಳುವುದನ್ನು ಹೊರತುಪಡಿಸಿ, ವೀಲುನಾಮೆಯ ಬಗ್ಗೆ ಯಾವುದೇ ಪ್ರಸ್ತಾವನೆ ಮಾಡಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿರುವಂತ ವೀಲುನಾಮೆಯನ್ನು ನಾನು ನೋಡಿರುವುದಿಲ್ಲ. ಸದರಿ ವೀಲುನಾಮೆಗಳಿಗೆ ಸಾಕ್ಷಿಯಾಗಿ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ತಿಳಿದಿಲ್ಲ. ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರು ಅವರ ಹಕ್ಕಿನ ಸ್ಥಿರಾಸ್ತಿಯ ಕುರಿತಾಗಿ ಯಾವುದೇ ದಾಖಲೆಗಳನ್ನು ಬರೆಯದೇ ಮೃತಪಟ್ಟಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ನೋಡಿ, ಅನುಭವ ಮಾಡಿಕೊಂಡಿರುವುದಿಲ್ಲ. ಪಹಣಿ ಪತ್ರಿಕೆಗಳಲ್ಲಿ ಹೆಸರು ಬದಲಾವಣೆಯಾಗುವ ಸಮಯದಲ್ಲಿ ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರ ವಾರೀಸುದಾರರಿಗೆ ಯಾವುದೇ ನೋಟೀಸು ಬಂದಿರುವುದಿಲ್ಲ. 1 ನೇ ಪ್ರತಿವಾದಿಯು ಸದರಿ ವೀಲುನಾಮೆಗಳನ್ನು ಸೃಷ್ಟಿಸಿದ ಕಾರಣ, ಸದರಿ ವೀಲುನಾಮೆಗಳು ಸಿಂಧು ದಾಖಲೆಗಳಾಗಿರುವುದಿಲ್ಲ ಮತ್ತು ಈ ಪ್ರಕರಣದ ಪಕ್ಷಗಾರರಿಗೆ ಬದ್ಧಪಡುವುದಿಲ್ಲ ಎಂದರೆ ಸರಿ. ವೀಲುನಾಮೆಗಳ ಕುರಿತಾಗಿ ನನ್ನ ತಾಯಿಗಾಗಲೀ ಅಥವಾ 2 ನೇ ವಾದಿಗಾಗಲೀ ಸದರಿ ವೀಲುನಾಮೆಗಳ ಬಗ್ಗೆ ಗಮನಕ್ಕೆ ಬರದ ಕಾರಣ, ತಮ್ಮ ವಾದಪತ್ರದಲ್ಲಿ ಅವುಗಳ ಬಗ್ಗೆ ಅವರು ತಿಳಿಸಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ಸಾಣೂರು, ನೆಲ್ಲಿಕಾರು, ಪೆರಾಡಿ , ಶಿರ್ತಾಡಿ, ಮರೋಡಿ ಯಲ್ಲಿರುವ ಕೆಲವು ಸ್ವತ್ತುಗಳನ್ನು ನೈಜ ಹಕ್ಕುದಾರರ ಒಪ್ಪಿಗೆ ಪಡೆಯದೆ ಮತ್ತು ಅವರ ಗಮನಕ್ಕೂ ತಾರದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಹಾಗೆ ಮಾರಾಟ ಮಾಡಿದ ಸ್ವತ್ತುಗಳ

ಕ್ರಯ ಮೊಬಲಗನ್ನು 1 ನೇ ಪ್ರತಿವಾದಿಯೇ ಪಡೆದಿದ್ದಾರೆ ಎಂದರೆ ಸರಿ. ಈ ದಾವೆ ಚಾಲ್ತಿಯಲ್ಲಿರುವ ಸಮಯದಲ್ಲಿ ಶಿರ್ತಾಡಿಯ ಸ್ಥಿರಾಸ್ತಿಯನ್ನು 1 ನೇ ಪ್ರತಿವಾದಿಯು ಅವರ ಹೆಂಡತಿ ಲಲಿತಾ ರವರ ಹೆಸರಿಗೆ ಬದಲಾವಣೆ ಮಾಡಿ, ಅದನ್ನು ಅವರ ಹೆಂಡತಿಯ ಮುಖಾಂತರ 3 ನೇ ವ್ಯಕ್ತಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಹಾಗೆ ಮಾರಾಟ ಮಾಡಿ ಬಂದ ಹಣವನ್ನು 1 ನೇ ಪ್ರತಿವಾದಿ ಉಪಯೋಗಿಸಿದ್ದಾರೆ. ಹಾಗೆ ನೈಜ ಹಕ್ಕುದಾರರ ಗಮನಕ್ಕೆ ಬಾರದೇ ಸ್ವತ್ತನ್ನು ಮಾರಾಟ ಮಾಡಲು 1 ನೇ ಪ್ರತಿವಾದಿಗಾಗಲೀ ಅಥವಾ ಅವರ ಪತ್ನಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ಇದರ ಬಗ್ಗೆ ಮೂಡಬಿದ್ರೆಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸದರಿ ಪ್ರಕರಣ ಈಗಲೂ ಚಾಲ್ತಿಯಲ್ಲಿದೆ.

ದಿಃ 13.11.2008 ರಲ್ಲಿ 7 ನೇ ಪ್ರತಿವಾದಿಗೆ ಸ್ವತ್ತನ್ನು ಮಾರಾಟ ಮಾಡಲು 1 ನೇ ಪ್ರತಿವಾದಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿ. ಶ್ರೀಧರ ಪಾಂಡಿಯವರು 1 ನೇ ಪ್ರತಿವಾದಿಯ ಜೊತೆ ನಂಬಿಕೆ ಮತ್ತ ವಿಶ್ವಾಸದಲ್ಲಿದ್ದ ಕಾರಣ, 1 ನೇ ಪ್ರತಿವಾದಿಯು ಶ್ರೀಧರ ಪಾಂಡಿಯವರಿಗೆ ಮೋಸ ಮಾಡಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಗೆ ಕಾನೂನಿನ ಪ್ರಕಾರ ಸಿಗಬೇಕಾದಂತಹ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ 1 ನೇ ಪ್ರತಿವಾದಿಯು ಎಲ್ಲಾ ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದರೆ ಸರಿ. ಈ ಪ್ರಕರಣ ಮತ್ತು ಮೂಡಬಿದ್ರೆಯ ಪ್ರಕರಣಗಳನ್ನು ಸಲ್ಲಿಸುವ

ಸಮಯದಲ್ಲಿ ನಾನು ನನ್ನ ತಾಯಿಯ ಜೊತೆ ಇದ್ದೆ ಎಂದರೆ ಸರಿ. ನಿಡಿ - 2 ರಂತೆ 1 ನೇ ಪ್ರತಿವಾದಿಯು 3 ತಿಂಗಳಲ್ಲಿ ದಾಖಲೆಗಳನ್ನು ಮಾಡಿಕೊಡುತ್ತಾರೆ ಎಂದು ನಂಬಿ, 2 ರಿಂದ 4 ನೇ ಪ್ರತಿವಾದಿಯರು ಈ ಪ್ರಕರಣದಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ನನ್ನ ತಾಯಿ ಮತ್ತು ಇತರೆ ವಾದಿಯರು ತಿಳಿಸಿರುವಂತಹ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಇತರೆ ವಾದಿಯರು ತಿಳಿಸಿದಂತೆ ದಾವಾ ಸ್ವತ್ತುಗಳು ಪಾಲಾಗತಕ್ಕ ಸ್ವತ್ತುಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಲವಾರು ಸಂದರ್ಭದಲ್ಲಿ 1 ನೇ ಪ್ರತಿವಾದಿಯ ಜೊತೆ ಸೇರಿ, 2 ರಿಂದ 4 ನೇ ಪ್ರತಿವಾದಿಯರಿಗೆ ತೊಂದರೆ ನೀಡಿದ್ದೇನೆ ಎಂದರೆ ಸರಿಯಲ್ಲ. ಇಲ್ಲಿಯವರೆಗೂ ನನಗೆ 1 ನೇ ಪ್ರತಿವಾದಿಯು ತಿಳಿಸಿದಂತಹ ವೀಲುನಾಮೆಗಳ ಬಗ್ಗೆ ಮಾಹಿತಿ ಇರಲಿಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.